**ರೈತರ ಬೆಳೆ ವಿಮಾ ಯೋಜನೆ**

186 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1997-98ನೇ ಸಾಲಿನಲ್ಲಿ ಎಷ್ಟು ಜನ ರೈತರು ಬೆಳೆ ವಿಮೆಗೆ ಒಳಗಾಗಿದ್ದರು;*

*ಆ) ಇವರಿಗೆ ಸರ್ಕಾರ ಪಾವತಿ ಮಾಡಿದ ಪ್ರೀಮಿಯಂ ಹಣವೆಷ್ಟು?*

*ಇ) ರೈತರ ಬೆಳೆ ವಿಮೆಯ ಶೇಕಡ 50 ರಷ್ಟು ಪ್ರೀಮಿಯಂ ಹಣವನ್ನು ಸರ್ಕಾರದವರೆ ಭರಿಸಲು ಉದ್ದೇಶಿಸಿದ್ದಾರೆಯೇ?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ 1997-98ನೇ ಸಾಲಿನಲ್ಲಿ ಫೆಬ್ರವರಿ 98ರ ಅಂತ್ಯದವರೆಗೆ 3,03,808 ಜನ ರೈತರು ವ್ಯಾಪಕ ಬೆಳೆ ವಿಮಾ ಯೋಜನೆಯಡಿಯಲ್ಲಿ ಒಳಗಾಗಿರುತ್ತಾರೆ.

ಆ) ಒಟ್ಟು 3,03,808 ಜನ ರೈತರಲ್ಲಿ 167351 ಜನ ಸಣ್ಣ ಮತ್ತು ಅತಿ ಸಣ್ಣ ರೈತರಿರುತ್ತಾರೆ. ಇವರು ಕಟ್ಟಲಿರುವ ಒಟ್ಟು ರೂ. 1,14,11,555-00 ಗಳ ಪ್ರೀಮಿಯಂ ಹಣದ ಶೇ. 50ರಷ್ಟನ್ನು ಸರ್ಕಾರವು ಪಾವತಿ ಮಾಡಲಿದೆ.

ಇ) ಹೌದು, ವ್ಯಾಪಕ ಬೆಳೆ ವಿಮಾ ಯೋಜನೆ ಯಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯ ಧನವಾಗಿ ನೀಡಲಾಗುವ ಶೇಕಡಾ 50ರಷ್ಟು ಪ್ರೀಮಿಯಂ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮವಾಗಿ ಭರಿಸುವುವು. ದೊಡ್ಡ ರೈತರಿಗೆ ಸಂಬಂಧಿಸಿದ ಪ್ರೀಮಿಯಂ ಅನ್ನು ಸರ್ಕಾರ ಭರಿಸುತ್ತಿರುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿದ 1997-98ನೇ ಸಾಲಿನಲ್ಲಿ ಎಷ್ಟು ಜನ ರೈತರು ಬೆಳೆ ವಿಮೆಗೆ ಒಳಗಾಗಿದ್ದರು ಎನ್ನುವ ಪ್ರಶ್ನೆಗೆ 3 ಲಕ್ಷ ಜನ ರೈತರು ಒಳಗಾಗಿದ್ದಾರೆ, ಇದಕ್ಕೆ ಸರ್ಕಾರದವರು ಒಂದು ಕೋಟಿ 14 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಕೊನೆಯ ಪ್ರಶ್ನೆಯಾದ, ರೈತರ ಬೆಳೆ ವಿಮೆಯ ಶೇ. 50ರಷ್ಟು ಪ್ರೀಮಿಯಂ ಹಣವನ್ನು ಸರ್ಕಾರದವರು ಭರಿಸಲು ಉದ್ದೇಶಿಸಿದ್ದಾರೆಯೇ, ಎಂದರೆ ಅದಕ್ಕೆ ಒಪ್ಪಿಕೊಂಡಿದ್ದಾರೆ. ನೀವು 3 ಲಕ್ಷ ಜನಕ್ಕೆ ಒಂದು ಕೋಟಿ ಕೊಟ್ಟಿದ್ದೀರಿ. ಯಾವ ಗೈಡ್‌ಲೈನ್ಸ್ ಮೇಲೆ ನೀವು ಈ ಹಣವನ್ನು ಕೊಟ್ಟಿದ್ದೀರಿ? ಎಕರೆವೈಸ್ ಕೊಡಲಾಗಿದೆಯೇ? ಯಾವ ರೀತಿ ನೀವು ಈ ಹಣ ಕೊಟ್ಟಿದ್ದೀರಿ? ಶೇ. 50ರಷ್ಟು ಎಂದು ಲೆಕ್ಕ ಮಾಡಿದರೆ ಒಬ್ಬ ರೈತನಿಗೆ 30 ರೂಪಾಯಿನಂತೆ ಬರುತ್ತದೆ. What is the basis you have adopted in allocating this one crore rupees? ನಮ್ಮ ಕರ್ನಾಟಕ ರಾಜ್ಯದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಆದಮೇಲೆ ಸಣ್ಣ ರೈತರು, ದೊಡ್ಡ ರೈತರು ಎಲ್ಲರೂ ಒಂದೇ ಆಗಿದ್ದಾರೆ. ದೊಡ್ಡ ರೈತರಿಗೂ ಕೂಡ ಕಮಿಟ್‌ಮೆಂಟ್ ಜಾಸ್ತಿ ಇರುತ್ತದೆ. ನೀವು ಒಂದು ಪಾಲಿಸಿಯನ್ನು ಮಾಡಿ ರೈತರಿಗೆ ಈ ಸಾರಿ

ಅನುಕೂಲವನ್ನು ಮಾಡಿಕೊಡಬೇಕು. ಎಲ್ಲಾ ರೈತರಿಗೆ ಇನ್‌ಷೂರೆನ್ಸ್ ಪಾಲಿಸಿಯನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ನಮ್ಮ ರಾಜ್ಯದಲ್ಲಿ ಎರಡು ರೀತಿಯ ರೈತರಿದ್ದಾರೆ. ಇರಿಗೇಟೆಡ್ ಫಾರ್ಮರ್ಸ್ ಮತ್ತು ನಾನ್ ಇರಿಗೇಟೆಡ್ ಫಾರ್ಮರ್ಸ್. ನಾನ್ ಇರಿಗೇಟೆಡ್ ಫಾರ್ಮರ್ಸ್ ಮಳೆಯನ್ನು ಆಧರಿಸಿ ಬೆಳೆಯತಕ್ಕಂಥ ಕ್ರಾಪ್‌ಗಳನ್ನು ಬೆಳೆಯುತ್ತಾರೆ. ಇವೆಲ್ಲಾ ಇದರಲ್ಲಿ ಬರುತ್ತವೆಯೇ ? ಮುಂದಿನ ವರ್ಷಕ್ಕೆ ನೀವು ಯಾವ ಕಾರ್ಯಕ್ರಮವನ್ನು ರೂಪಿಸಿದ್ದೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಈ ರಾಜ್ಯದಲ್ಲಿ ಸಹಕಾರ ಸಂಘಗಳ ಮೂಲಕ, ವಾಣಿಜ್ಯ ಬ್ಯಾಂಕುಗಳ ಮೂಲಕ ಮತ್ತು ಗ್ರಾಮೀಣ ಬ್ಯಾಂಕುಗಳ ಮೂಲಕ ಯಾರು ಸಾಲವನ್ನು ಪಡೆಯುತ್ತಾರೆ, ಅವರು ಸಣ್ಣ ರೈತರಿರಬಹುದು ಅಥವಾ ದೊಡ್ಡ ರೈತರಿರಬಹುದು, ಅವರೆಲ್ಲರೂ ಸಹ ಕಡ್ಡಾಯವಾಗಿ ಈ ಬೆಳೆ ವಿಮೆಗೆ ಒಳಪಡುತ್ತಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅವರು ಕೊಡುವಂಥ ಪ್ರೀಮಿಯಂನಲ್ಲಿ ಶೇ. 50ರಷ್ಟನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಭರಿಸುತ್ತದೆ. ಉಳಿದುದನ್ನು ರೈತರು ಕೊಡಬೇಕಾಗುತ್ತದೆ. ಈಗ ಒಂದು ಹೊಸ ಯೋಜನೆ ಇಡೀ ದೇಶದಲ್ಲಿ ಜಾರಿಯಲ್ಲಿದೆ. ಅದನ್ನು ಪ್ರಾಯೋಗಿಕವಾಗಿ ನಮ್ಮ ರಾಜ್ಯದಲ್ಲಿ ಒಂದು ಜಿಲ್ಲೆಯಲ್ಲಿ ಮಾತ್ರ ಕಾರ್ಯಗತ ಮಾಡುತ್ತಿದ್ದೇವೆ. ಅದರಲ್ಲಿ ಹೊಸ ಸೂತ್ರಗಳನ್ನು ಅಳವಡಿಸಿದ್ದಾರೆ. ಅದರ ಪ್ರಕಾರ ಥ್ರೆಷೋಲ್ಡ್ ಯೀಲ್ಡ್ ಇಷ್ಟು ಬರಲೇ ಬೇಕು ಎಂದು ಒಂದು ತಾಲ್ಲೂಕನ್ನು ಒಂದು ಘಟಕವನ್ನಾಗಿ ಮಾಡಿದ್ದಾರೆ. ಆ ತಾಲ್ಲೂಕಿನಲ್ಲಿ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್‌ಗಳನ್ನೂ ಮಾಡುತ್ತಾರೆ. ಅದರಲ್ಲಿ ನಿಗದಿಪಡಿಸಿರತಕ್ಕಂಥ ಬೆಳೆಗಿಂತ ಕಡಿಮೆ ಇಳುವರಿ ಬಂದಿದ್ದರೆ ಆಗ ಅವರ ಪೂರ್ತಿ ಹಣ ವಿಮೆಗೆ ಬರತಕ್ಕಂಥಾದ್ದಕ್ಕೆ ಅವಕಾಶವಿದೆ. ಇದು ಈಗ ಇರತಕ್ಕಂಥ ಯೋಜನೆ. ಈ ಪರಿಷ್ಕೃತವಾದಂಥ ಯೋಜನೆಯಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ, ತಾಲ್ಲೂಕು ಎನ್ನುವಂಥ ಘಟಕವನ್ನು ತೆಗೆದು ಕನಿಷ್ಠ ಹೋಬಳಿ ಅಥವಾ ಪಂಚಾಯಿತಿಯನ್ನು ಥ್ರೆಷೋಲ್ಡ್ ಯೀಲ್ಡ್‌ಗೆ ನಿಗದಿಪಡಿಸಬೇಕು ಎನ್ನುವ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದು ಒಪ್ಪಿಗೆಯಾದ ನಂತರ ಜಾರಿಗೆ ಬರಲು ಸಾಧ್ಯವಾಗುತ್ತದೆ. ಇದು ರಾಜ್ಯ ಸರ್ಕಾರದ ಸೀಮಿತವಾದ ವ್ಯಾಪ್ತಿಗೆ ಬರುತ್ತದೆ.

ಶ್ರೀ ಅಲ್ಲಂ ವೀರಭದ್ರಪ್ಪ : ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ ರಾಜ್ಯದ ಬೀದರ್, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ರೈತರು ಜಿಗುಪ್ಸೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಒಂದು ಸಮಿತಿಯೂ ಅಲ್ಲಿಗೆ ಹೋಗಿದೆ. ಮುಂದಿನ ವರ್ಷದಿಂದ, ಒಂದೆರಡು ತಿಂಗಳುಗಳ ನಂತರ ಮಳೆಗಾಲ ಬಂದ ಮೇಲೆ ಸರ್ಕಾರದವರು ಈ ಮೂರು ಜಿಲ್ಲೆಗಳು ವ್ಯಾಪ್ತಿಗೆ ಬರುವಂತೆ ಯಾವುದಾದರೂ ಯೋಜನೆಯನ್ನು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಈ ದೇಶದಲ್ಲಿ ಯಾವುದೇ ವಿಮೆಯಾಗಲಿ, ಅದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರತಕ್ಕಂಥಾದ್ದು. ರಾಜ್ಯ ಸರ್ಕಾರಕ್ಕೆ ಸೀಮಿತವಾದಂಥ ಅಧಿಕಾರವಿದೆ. ರಾಜ್ಯ ಸರ್ಕಾರವೇ ಒಂದು ಯೋಜನೆಯನ್ನು ಮಾಡಬೇಕೆಂದರೆ ಅದು ಕಷ್ಟವಾಗುತ್ತದೆ. ಬಹಳ ಹಣವನ್ನು ಭರಿಸಬೇಕಾಗಿದ್ದು, ಇದು ಕಷ್ಟವಾಗತ್ತದೆ. ಆದರೆ ಈ ಅಭಿಪ್ರಾಯವನ್ನು ನಾವು ಕೇಂದ್ರ ಸರ್ಕಾರಕ್ಕೆ ತಿಳಿಸುವವರಿದ್ದೇವೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೆ, ಬೆಳೆ ವಿಮೆ ವಿಚಾರದಲ್ಲಿ ಬದಲಾವಣೆ ಅತ್ಯಾವಶ್ಯಕ, ಈಗಿನ ಬೆಳೆ ವಿಮೆಯಿಂದ ಏನೂ ಪ್ರಯೋಜನವಿಲ್ಲವೆಂದು ಮಾನ್ಯ ಕೃಷಿ ಸಚಿವರು ತಿಳಿಸಿದ್ದರು.

ಶ್ರೀ ಸಿ. ಬೈರೇಗೌಡ : ಇದರಿಂದ ಪೂರ್ತಿ ಪ್ರಯೋಜನ ಇಲ್ಲವೆಂದಲ್ಲ. ಇಂತಿಷ್ಟು ಇಳುವಳಿ ಬರಬೇಕೆಂದು ಇದೆ. ಅಷ್ಟು ಇಳುವರಿ ಬಂದರೆ ವಿಮೆ ಸಿಗುವುದಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಅಂದರೆ ಒಂದು ತಾಲ್ಲೂಕಿನಲ್ಲಿ ಸಾಮೂಹಿಕವಾಗಿ ಪೂರ್ಣ ಬೆಳೆ ನಾಶವಾದರೆ ಮಾತ್ರ ಈ ವಿಮೆಯಿಂದ ಪ್ರಯೋಜನ ಸಿಗುವಂಥದ್ದು. ಬಹಳ ಮುಖ್ಯವಾಗಿ ಬೆಳೆ ವಿಮೆಗೆ ಅಣೆವಾರಿ ಪದ್ಧತಿ ಬೇಕಾಗಿರುವಂಥದ್ದು. ಕಂದಾಯ ಇಲಾಖೆಯವರು ಅಣೆವಾರಿ ಮಾಹಿತಿ ಕೊಡಬೇಕು. ಬೆಳೆ ನಾಶವಾದ ಬಗ್ಗೆ ಪರಿಶೀಲಿಸಲು ನಾವು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗೆ ಹೋಗಿದ್ದಾಗ ಕಂದಾಯ ಇಲಾಖೆಯವರು ಗುಲ್ಬರ್ಗಾದಲ್ಲಿ ಅಣೇವಾರಿ ಮಾಹಿತಿ ಕೊಟ್ಟಿದ್ದಾರೆ ಆದರೆ ಬೀದರ್ ಜಿಲ್ಲೆಯಲ್ಲಿ ಅಣೇವಾರಿ ಮಾಹಿತಿಯನ್ನು ಕೊಟ್ಟಿಲ್ಲ. ಇಲ್ಲಿ ನನ್ನ ಪ್ರಶ್ನೆ ಏನೆಂದರೆ - ಇಡೀ ರಾಜ್ಯದಲ್ಲಿ ಹಿಂಗಾರು ಬೆಳೆ ಮತ್ತು ಮುಂಗಾರು ಬೆಳೆಯಲ್ಲಿ ಎಷ್ಟರಮಟ್ಟಿಗೆ ನಷ್ಟವುಂಟಾಗಿದೆ ಎಂಬುದರ ಬಗ್ಗೆ ಪಹಣಿ ಬರೆಯತಕ್ಕಂಥ ವಿಷಯದಲ್ಲಿ ಕೃಷಿ ಇಲಾಖೆ, ನೀರಾವರಿ ಇಲಾಖೆ ಮತ್ತು ಕಂದಾಯ ಇಲಾಖೆಯವರು ಜಾಯಿಂಟ್ ಆಗಿ ಕೆಲಸ ಮಾಡಿ ಎಷ್ಟೆಷ್ಟು ನಷ್ಟವಾಗಿದೆ ಎನ್ನತಕ್ಕಂಥದ್ದನ್ನು ಗಮನಕ್ಕೆ ತಂದರೆ ವಿಮೆ ಬರಲಿಕ್ಕೆ ಬಹಳ ಅನುಕೂಲವಾಗುತ್ತದೆ. ದಯವಿಟ್ಟು ಆ ಕೆಲಸವನ್ನು ಮಾಡಿಸಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಮೊದಲೇ ಹೇಳಿದ ಹಾಗೆ ನಿಗದಿಯಾದ ಪ್ರತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಇಂತಿಷ್ಟು ಕ್ರಾಪ್ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್ಸನ್ನು ಮಾಡಬೇಕು ಎನ್ನುವಂಥದ್ದು ಇದೆ. ಇದನ್ನು ಅಂಕಿಅಂಶಗಳ ಇಲಾಖೆಯವರು ಮಾಡುತ್ತಾರೆ. ಇದನ್ನು ಮತ್ತು ಮಾನ್ಯ ಪುಟ್ಟಣ್ಣಯ್ಯನವರು ತಿಳಿಸಿದ ಹಾಗೆ ಅಣೇವಾರಿ ಇವರೆಡನ್ನೂ ಸೇರಿಸಿ ನಾವು ನಿಗದಿಪಡಿಸಿರತಕ್ಕಂಥ ಸೂತ್ರವಾಗಿರುತ್ತದೆ. ಯಾವ ಮಟ್ಟದಲ್ಲಿ ಬೆಳೆ ಆಗಬೇಕೋ ಆ ಮಟ್ಟಕ್ಕಿಂತ ಕಡಿಮೆ ಬೆಳೆ ಬಂದರೆ ವಿಮೆ ಸಿಗುತ್ತದೆ. ಇಲ್ಲದಿದ್ದರೆ ವಿಮೆ ಸಿಗುವುದಿಲ್ಲ. ಈ ಬದಲಾವಣೆ ಮಾಡಬೇಕು ಎನ್ನುವಂಥದ್ದು ನಮ್ಮ ಅಭಿಪ್ರಾಯ ಕೂಡ ಹೌದು, ಮತ್ತು ರಾಜ್ಯಸರ್ಕಾರದ ಅಭಿಪ್ರಾಯ ಕೂಡ ಆಗಿರುತ್ತದೆ. ಅದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ.

## ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ.

187 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ದೇವಸ್ಥಾನಗಳು ಮುಜರಾಯಿ ಇಲಾಖೆಗೆ ಸೇರಿವೆ (ವಿವರ ನೀಡುವುದು);*